SATYAVADI- An Anglo Kannada Weekly. Published Every Saturday

Reg. No. M-1299

ಸತ್ಯವಾದಿ

ಬಿಡಿ ಪತ್ರಿಕೆ ೬ಪೈ

ವಾರ್ಷಿಕ ಚಂದಾ 1—0—0] ಪ್ರತಿ ಶನಿವಾರ ಪ್ರಕಟಿಸಲ್ಪಡುವುದು. [ಅಂಚೆ ವೆಚ್ಚ ಸಮೇತ 2—0—0

ಸಂಪುಟ 4.] ಮೈಸೂರು, ಶನಿವಾರ, 8ನೇ ಅಕ್ಟೋಬರ್ 1921. [ಸಂಚಿಕೆ 19

[ಈ ಪ್ರಾಸ್ಪೆಕ್ಟಸ್ಸಿನ ನಕಲು ಬೆಂಗಳೂರಿನಲ್ಲಿರುವ ಮೈಸೂರು ಸೀಮೆಯ ಜಾಯಿಂಟ್‌ಸ್ಟಾಕ್ ಕಂಪನಿಗಳ ರಿಜಿಸ್ಟ್ರಾರ್‌ರವರಲ್ಲಿ ದಾಖಲ್ಮಾಡಿರುತ್ತೆ.]

ಶ್ರೀ ಕೃಷ್ಣ ಡೆಯಿರಿ ಫಾರಂ, ಲಿಮಿಟೆಡ್, ಮೈಸೂರು.

(ಕಂಪನಿಗಳ ಕಾನೂನ್ ಪ್ರಕಾರ ರಿಜಿಸ್ಟರಾದದ್ದು)

ಮೂಲಧನ ರೂ. **50,000**

ಷೇರು 1 ಕ್ಕೆ 10 ರೂಪಾಯಿನಂತೆ 5,000 ಷೇರುಗಳಾಗಿ ವಿಭಾಗಿಸಲ್ಪಟ್ಟಿದೆ.

ಸದ್ಯದಲ್ಲಿ ಮೂಲಧನಕ್ಕೆ ರೂ. **25,000** ಕೂಡಿಸಲ್ಪಡುವುದು.

ಷೇರು ಮೊಬಲಗು ಪಾವತಿ ಮಾಡುವ ಕ್ರಮ—ದರಖಾಸ್ತಿನ ಕೂಡ ರೂ. 1 ; ಷೇರು ಹಂಚಿದ ಮೇಲೆ ರೂ. 1 ; ಉಳಿದ ಮೊಬಲಗನ್ನು ಎರಡು ತಿಂಗಳ ಅವಧಿಗೆ ಕಡಮೆಯಿಲ್ಲದ ವಾಯಿದೆಯಲ್ಲಿ ಷೇರ್ ಒಂದಕ್ಕೆ ರೂ. 1 ರಂತೆ ಪಾವತಿ ಮಾಡತಕ್ಕದ್ದು.

ಡೈರೆಕ್ಟರುಗಳು—ಮ|| ರಾ|| ಶ್ರೀಗಳಾದ (1) ಎಂ. ವೆಂಕಟಕೃಷ್ಣಯ್ಯನವರು, ಮ್ಯುನಿಸಿಪಲ್ ಕೌನ್ಸಿಲರು, ಮೈಸೂರು ; (1) ಕೆ. ಕೃಷ್ಣದಾಸ್‌ರವರು ಬಿ. ಎ, ಎಲ್ ಎಲ್. ಬಿ., ಅಡ್ವೋಕೇಟ್, ಮೈಸೂರು ; (3) ಎ. ಕೃಷ್ಣೇಅರಸನವರು, ರಿಟೈರ್ಡ್ ಅಮಲ್ದಾರ್ ಮತ್ತು ಲ್ಯಾಂಡ್ ಹೋಲ್ಡರ್ ಮೈಸೂರು ; (4) ಎಂ. ಎ, ಸುಬ್ಬರಾಯರು, ಏಜಂಟ್, ಮರಾಟಾ ಬ್ಯಾಂಕ್, ಮೈಸೂರು ; (5)ಸವಾಯ್ ರಂಗಣ್ಣನವರು, ವರ್ತಕರು ಮತ್ತು ಬ್ಯಾಂಕರ್ ಮೈಸೂರು ; (6) ಎಸ್. ವೆಂಕಟರಾಯರು, ಲ್ಯಾಂಡ್ ಹೋಲ್ಡರ್, ನಂಜನಗೂಡು ; (7) ಎಂ. ವಿ. ಸಂಜೀವರಾಜೇ ಅರಸನವರು, ಲ್ಯಾಂಡ್ ಹೋಲ್ಡರ್ ಮೈಸೂರು, (ಸ್ಪೆಷಲ್) ; (8) ಎಸ್. ಕೃಷ್ಣರಾಯರು ಮರ್ಚೆಂಟ್, ಮೈಸೂರು ; (ಸ್ಪೆಷಲ್)

ಬ್ಯಾಂಕರ್ಸ್—ದಿ ಬ್ಯಾಂಕ್ ಆಫ್ ಮೈಸೂರು, ಲಿಮಿಟೆಡ್, ಮೈಸೂರು.

ಆಡಿಟರುಗಳು—ಮುಂದೆ ನೇಮಕ ಮಾಡಲ್ಪಡುತ್ತೆ.

ಲೀಗಲ್ ಅಡ್ವೈಜರು—ಮ|| ರಾ|| ಸಿ. ನರಸಿಂಹಯ್ಯನವರು, ಬಿ. ಎ., ಬಿ ಎಲ್. ಅಡ್ವೋಕೇಟ್, ಮೈಸೂರು.

ಮಾನೇಜಿಂಗ್ ಏಜಂಟರು—ಮ|| ರಾ|| ಶ್ರೀಗಳಾದ ಎಂ ವಿ. ಸಂಜೀವರಾಜೇ ಅರಸಿನವರು ಮತ್ತು ಎಸ್. ಕೃಷ್ಣರಾವ್, ಕಂಪನಿ.

ರಿಜಿಸ್ಟರ್ಡ್ ಆಫೀಸು—ನಂ. 2—3 ಲ್ಯಾನ್ಸ್‌ಡೌನ್ ಬಜಾರ್ (ಮಪಡಿ)

ಪ್ರಾಸ್ಪೆಕ್ಟಸ್ (ವಿಷಯ ವಿವರಣೆ)

ಈ ಕಂಪನಿಯ ಮೆಮೋರಾಂಡಂ ಆಫ್ ಅಸೋಸಿಯೇಷನ್ನಿನಲ್ಲಿ ನಮೂದಿಸಿರುವ ಉದ್ದೇಶಗಳಿಗೋಸ್ಕರವೂ, ಮುಖ್ಯವಾಗಿ ಮೈಸೂರು ಪ್ರಜೆಗಳಿಗೆ ಅದರಲ್ಲೂ ಮಕ್ಕಳ ಪೋಷಣೆಗೆ ಅವಶ್ಯವಾದ ಅಪ್ಪಟಾ ಹಾಲನ್ನು ಒದಗಿಸಲೂ ಏರ್ಪಾಡು ಮಾಡಲ್ಪಟ್ಟಿದೆ ಸದ್ಯದಲ್ಲಿ ಎಂಥಾ ನಿರ್ಬಂಧವಾದ ಕಾನೂನು ಮಾಡಿದಾಗ್ಯೂ ನೀರು ಬೆರಸದ ಮತ್ತು ಶುಚಿಯಾದ ಹಾಲು ದೊರಕುವುದು ಸಾಧ್ಯವಿಲ್ಲವೆನ್ನುವುದೂ ಅಬಾಲವೃದ್ಧರಿಗೂ ಆಯುರಾರೋಗ್ಯ, ಕಾಯಪುಷ್ಟಿಗಳ ಬೆಳುವಳಿಗೆಗೆ ಅಪ್ಪಟಾ ಹಾಲು ಪರಮಾವಶ್ಯವೆನ್ನುವುದೂ ಎಲ್ಲರಿಗೂ ತಿಳಿದೇ ಇದೆ. ಕೆಲವು ಕಾಲದ ಹಿಂದೆ ನಿರ್ಮಲವಾದ ಹಾಲು ಅಗ್ಗವಾಗಿಯೂ, ಯಥೇಚ್ಛವಾಗಿಯೂ ದೊರಕುತ್ತಿತ್ತು. ಕಾರಣಾಂತರಗಳಿಂದ ಈಗ ಒಳ್ಳೆಯ ಹಾಲಿಗೆ ಗೊಟ್ಟು ಬಂದಿದೆ. ಕಾಫೀ ಹೋಟಲು, ವಿದ್ಯಾರ್ಥಿನಿಲಯ, ಆಸ್ಪತ್ರೆ, ಇತ್ಯಾದಿಗಳು ಹೆಚ್ಚಿಹೋಗಿವೆ. ವರ್ದಂತಿ ಮತ್ತು ನವರಾತ್ರಿ ಉತ್ಸವಾದಿಗಳ ದೆಸೆಯಿಂದ ಮೈಸೂರು ಪಟ್ಟಣದಲ್ಲಿ ಒಳ್ಳೇ ಹಾಲು ಸಿಕ್ಕುವುದೇ ದುರ್ಲಭ. ಇದನ್ನೆಲ್ಲಾ ನೋಡಿ ಈ ಹಾಲಿನ ಕೊರತೆಯನ್ನು ಕೂಡಿದ ಮಟ್ಟಿಗೂ ನಿವಾರಣೆ ಮಾಡಬೇಕೆಂದೂ, ಈ ಕಂಪನಿಯ ಷೇರುದಾರರಿಗಾದರೂ ಒಳ್ಳೇ ಹಾಲನ್ನು ಒದಗಿಸೋಣವೆಂದೂ ಉದ್ದೇಶಪಟ್ಟಿದೆ.

6 ನೇ ಪುಟವನ್ನು ನೋಡಿರಿ.

ಈಗ ಇರುವ ಏರ್ಪಾಡೂ ಅದನ್ನು ಅಭಿವೃದ್ಧಿಪಡಿಸುವುದೂ.

ಮೈಸೂರು ಕೃಷ್ಣರಾಜೇಂದ್ರ ತೋಟದಲ್ಲಿ ಶ್ರೀ ಕೃಷ್ಣ ಡೆಯಿರಿಫಾರಂ ಎಂಬ ಕಂಪನಿ ಕೆಲವು ಕಾಲದಿಂದ ನಡೆಯುತ್ತಿದೆ. ಅದನ್ನೇ ಮೇಲ್ಕಂಡ ಕಂಪನಿಯವರು ಪ್ರತಿಫಲ ಕೊಟ್ಟು ಪಡೆದುಕೊಂಡು ದೊಡ್ಡದುಮಾಡಿ ಹೆಚ್ಚು ಹಾಲು ಒದಗುವ ಏರ್ಪಾಡು ಮಾಡುವರು. ಇದಕ್ಕೆ ಅವಶ್ಯವಾದ ಕರಾರು ಸಹಾ ಆಗಿದೆ. 1921 ನೇ ಏಪ್ರಿಲ್ ವರಗಿನ ಆರು ತಿಂಗಳ ಜಮಾಖರ್ಚು ಲೆಕ್ಕಗಳನ್ನು ನೋಡಿದ್ದರಲ್ಲಿ ತಿಳಿದುಬಂದಿರುವುದೇನೆಂದರೆ.—

ಜವಾಬ್ದಾರಿ

ಮೂಲಧನ	1200-0-0
ಹಾಲಿನವರಿಗೂ ಇತರರಿಗೂ ಸಲ್ಲಬೇಕಾಗಿರುವದು	80-0-0
ಗುತ್ತಿಗೆ ಸಲ್ಲಬೇಕಾಗಿರುವುದು	200-0-0
ನಿವ್ವಳ ನಫೆ	281-1-3
ಜುಮ್ಲಾ ...	1761-1-3

ಹಾತಿರತಕ್ಕ ಆಸ್ತಿ

ಎಮ್ಮೆಗಳು [ಅಸಲ್ ಖರೀದಿ]	878-0-0
ಪಾತ್ರೆಪದಾರ್ಥಗಳು	53-0-0
ವಸೂಲಾಪಬೇಕಾದ ಉದರಿ	185-0-6
ನಗದು ಹಾಜತಿ	650-0-0
ಜುಮ್ಲಾ	1761-1-3

"ಸತ್ಯವಾದಿ"

ಮೈಸೂರು ಶನಿವಾರ 8 ನೇ ಅಕ್ಟೋಬರ್ 1921

ಬಾಲಕ ಅಸಹಕಾರ

ಬೊಂಬಾಯಿ ನಗರದಲ್ಲಿ ಒಂದು ವಿಚಿತ್ರವಾದ ಸಂಗತಿಯು ಸಂಭವಿಸಿತು. ಮಹಾತ್ಮಾ ಗಾಂಧಿಯವರು ಸ್ವದೇಶಿ ವ್ರತವನ್ನು ಭರತಖಂಡದವರಿಗೆಲ್ಲಾ ಬೋಧಿಸಿದಂದಿನಿಂದ ಮೂರು ವರ್ಷ ವಯಸ್ಸಿನ ಒಂದು ಮಗುವು ಸ್ವದೇಶಿ ಬಟ್ಟೆಗಳನ್ನೇ ಉಪಯೋಗಿಸುತ್ತಿತ್ತು. ಹೋದ ಕಡೆಯಲ್ಲೆಲ್ಲಾ "ಮಹಾತ್ಮ ಗಾಂಧೀಕಿಜೈ" "ತಿಲಕ್ ಮಹಾರಾಜ್‌ಕಿಜೈ" ಎಂಬದಾಗಿ ಜಯ ಘೋಷ ಮಾಡುತ್ತಿತ್ತು. ಮೊನ್ನೆ (ಕಳೆದ 30ನೇ ತಾರೀಖಿನ) ದಿವಸ ಆ ಮಗುವು ತನ್ನ ಅಂತ್ಯಕಾಲದಲ್ಲಿ ಸ್ವರ್ಗಾರೋಹಣಕಾಲದಲ್ಲಿ) ಏನನ್ನೂ ಅನ್ನದೆ ಮಹಾತ್ಮಾ ಗಾಂಧೀಕಿಜೈ ಎಂಬದಾಗಿ ಮಾತ್ರ ಹೇಳಿ ಪ್ರಾಣವನ್ನು ಬಿಟ್ಟಿತು. ಈ ಮಗುವಿನ ದೇಶಾಭಿಮಾನವು ಇಷ್ಟೇ ಎಂದು ಹೇಳಲಸಾಧ್ಯ. ಚಿಕ್ಕವಯಸ್ಸಿನ ಮಗುವಾದರೂ ಮಹಾತ್ಮರು ಕೈಕೊಂಡ ದೇಶವಾತ್ಸಲ್ಯದ ಕೆಲಸವನ್ನೂ ಅಸಹಕಾರದ ಮಹತ್ವವನ್ನು ತಿಳಿಯಿತು. ಅನೇಕರು ವೃದ್ಧರಾದರೂ ಮಹಾತ್ಮರು ಬೋಧಿಸಿದ ತತ್ವಗಳ ಮಹತ್ವವನ್ನು ತಿಳಿಯದವರಾಗಿರುವರು. ಭಗವಂತನು ಆ ಶಿಶುವಿನ ಆತ್ಮಕ್ಕೆ ಸದಾ ಶಾಂತಿಯನ್ನು ದಯೆಪಾಲಿಸಲೆಂದು ನಾವು ಸದಾ ಅತನನ್ನು ಪ್ರಾರ್ಥಿಸುತ್ತೇವೆ.

ಮದ್ರಾಸ್ ಸಮುದ್ರತೀರದಲ್ಲಿ "ಮಹಮ್ಮದ್ ಅಲಿ ಬೇಗಮ್" ರವರು ಮಾಡಿದ ಭಾಷಣ

ಹಿಂದೂ ಮುಸಲ್ಮಾನ ಸಹೋದರ ಸಹೋದರಿಯರಿರಾ ನನ್ನ ಪತಿಯನ್ನು ಸರ್ಕಾರದವರು ದಸ್ತಗಿರಿಮಾಡಿದ್ದಾಗ್ಗೂ ನೀವು ನಾನು ಖಿನ್ನಳಾಗಿಲ್ಲವೆಂಬ ಭಾಗವನ್ನು ನಿಮಗೆ ತಿಳಿಸಲು ಸಂತೋಷ ಚಿತ್ತಳಾಗಿದ್ದೇನೆ. ಅತನ ಕಾರ್ಯ ಭಾಗಗಳನ್ನೆಲ್ಲಾ ನನ್ನ ಕೈಲಾದಮಟ್ಟಿಗೂ ಮಾಡುವುದಕ್ಕೆ ಒಪ್ಪಿ ಕಾರಾಗೃಹದಲ್ಲಿ ಸಂತೋಷಚಿತ್ತವುಳ್ಳವನಾಗಿರಬೇಕೆಂದು ಹೇಳಿರುತ್ತೇನೆ.

ಸ್ವರಾಜ್ಯವನ್ನು ಪಡೆಯುವುದಕ್ಕೂ ಮೌಲಾನಾ ಸಾಹೇಬರನ್ನು ಜಾಗ್ರತೆ ಬಿಡಿಸಿಕೊಳ್ಳುವುದಕ್ಕೂ ನಿಮಗೆ ಇಷ್ಟವಿದ್ದಲ್ಲಿ ನೀವುಗಳೆಲ್ಲರೂ ಕಷ್ಟಪಟ್ಟು ಕೆಲಸ ಮಾಡುವುದಲ್ಲದೆ ಪ್ರತಿಯೊಬ್ಬರೂ ಸ್ವದೇತೀ ಬಟ್ಟೆಯನ್ನು ಧರಿಸಬೇಕು. ಸ್ವದೇಶೋದ್ಧಾರಕ್ಕೂ, ಇಸ್ಲಾಂ ಮತೋದ್ಧಾರಕ್ಕೂ ಎಲ್ಲರೂ ಕಷ್ಟಪಟ್ಟು ಕೆಲಸಮಾಡುವುದಕ್ಕೆ ಉದ್ಯುಕ್ತರಾಗಿರುವ ಕಾರಣ ನನ್ನ ಸಹೋದರಿಯರಾದ ಭಾರತಮಹಿಳೆಯರೆಲ್ಲರೂ ಶ್ರೀ ಜರಕದಿಂದ ನೂಲುವುದನ್ನು ಕಲಿಯಬೇಕು.

ಪ್ರತಿಯೊಬ್ಬ ಮಹಮ್ಮದೀಯನೂ ಆಂಗೋರಾ ಫಂಡಿಗೆ ಚಂದಾ ಕೊಡಬೇಕೆಂಬದಾಗಿಯೂ, ಮೌಲಾನಾ ಸಾಹೇಬರ ಸ್ಥಳಕ್ಕೆ, ಸ್ವದೇಶೋದ್ಧಾರಕ್ಕೂ, ಇಸ್ಲಾಂ ಮತಕ್ಕೂ ಕೆಲಸಮಾಡುವುದಕ್ಕೆ ಜನಗಳು ಮುಂದಾಳುಗಳಾಗಿ ಬರಬೇಕೆಂಬದಾಗಿಯೂ ನನ್ನ ಕೋರಿಕೆ"

ಮೆ|| ಮಿಲ್ಲರ್ ಹಂಜಾಪಬ್ಲಿಸ್ಟ್ ಸಾಹೇಬರವರು

ಈ ದೊಡ್ಡ ಮನುಷ್ಯರು ಕಳೆದ ಲೆಜಿಸ್ಲೇಟಿವ್ ಕೌನ್ಸಿಲ್ ಎಲೆಂಗಿನಲ್ಲಿ ಬಡ್ಡಿಟ್ಟಿಗೆ ಸಂಬಂಧಪಟ್ಟ ಭಾಷಣ ಒಂದನ್ನು ಮಾಡಿದರು. ಈ ಭಾಷಣವನ್ನು ಮುಗಿಸುವಾಗ ("I Cannot conclude without making reference to the order on the Miller Committee report to which I was a party and for which I take the fullest responsibilty etc ಅಂದರೆ ಮಿಲ್ಲರ್ ಕೂಟದ ವರದಿಯ ಮೇಲಾಗಿರುವ ಅಪ್ಪಣೆಗೆ ನಾನು ಭಾಗಿಯಾಗಿದ್ದೆನು, ಇದರ ಪೂರ್ಣ ಜವಾಬ್ದಾರಿಯನ್ನೂ ನಾನೇ ವಹಿಸುವೆನು, ಈ ವಿಷಯವನ್ನು ನಮೂದಿಸದ ನನ್ನ ಮಾತನ್ನು ಮುಗಿಸೆನು) ಎಂದು ಹೇಳಿದರು.

ಇದರಿಂದ ನಮ್ಮ ಸಾಹೇಬರು, ರಾಜ್ಯಭಾರದ ಸೂತ್ರವು ಎಷ್ಟು ಸುಲಭವಾಗಿ ತಮ್ಮ ಕೈಯಲ್ಲಿ ಸಿಕ್ಕಿಬಿದ್ದಿರುವದೆಂದು ತಿಳಿದಿರುವರೋ, ಅದು ವ್ಯಕ್ತವಾಗುವನು ನಮ್ಮ ಹಜರತ್‌ರವರು ತಮ್ಮ ಮೇಲೆ ದಿವಾನರೂ ಶ್ರೀಮನ್ಮಹಾರಾಜರವರೂ ಇರುವರೆಂಬುದನ್ನೂ ಮರೆತು ಮಿಲ್ಲರ ಕೂಟದ ವರದಿಯ ಮೇಲಪ್ಪಣೆಯನ್ನು ಹುಟ್ಟಿಸಲು ತಾವೇ ಪೂರ್ಣಾಧಿಕಾರಿಗಳಾಗಿದ್ದೇವೆಂದು ಎಚ್ಚರಿಸಿರುವದು, ಇವರ ಭಾವಚಿತ್ರವನ್ನು ಭೂತಕನ್ನಡಿಯಲ್ಲಿಟ್ಟು ತೋರಿಸಿಕೊಟ್ಟಂತಾಗಿರುವದು. ಇವರಾಡಿದ ಮಾತು ಅನೇಕರಿಗೆ ನಮ್ಮನ್ನಾಳುವವರು ಶ್ರೀಮನ್ಮಹಾರಾಜರವರೋ, ಅಥವಾ ಹಂಚಾಹುಸೇನ ಸಾಹೇಬರವರೋ, ಎಂಬ ಶಂಕೆಯನ್ನುಂಟುಮಾಡುತ್ತಿರುವುದಕ್ಕಾಗಿ ತುಂಬಾ ವಿಷಾದಿಸಬೇಕಾಗಿದೆ. ಯಾವದೊಂದು ರಾಜ್ಯ ಕಾರ್ಯವನ್ನು ನಡೆಸಬೇಕಾದರೂ, ದಿವಾನರೂ ಅವರಿಗೆ ಸಹಾಯಕರಾದ ಕೌನ್ಸಿಲರುಗಳೂ ಪರ್ಯಾಲೋಚಿಸಿ ತಮ್ಮ ತಮ್ಮ ಮತಗಳನ್ನು ಕೊಟ್ಟು ಅದರ ಮೇಲಿನ ಅಪ್ಪಣೆಗಾಗಿ ಶ್ರೀಮನ್ಮಹಾರಾಜರವರಲ್ಲಿ ವಿಜ್ಞಾಪಿಸುವದೂ, ಶ್ರೀಮನ್ಮಹಾರಾಜರವರು ಬಹುಮತ ವ್ಯಾಜ್ಯವನ್ನನುಸರಿಸಿ ಅದರ ಮೇಲೆ ಅಪ್ಪಣೆಯನ್ನು ದಯಪಾಲಿಸುವದೂ ಸರ್ವವಿದಿತ ವಿಷಯವಾಗಿರುವದು. ನಮ್ಮ ಹಜರತ್ತರ ವಿಚಿತ್ರ ಭಾಷಣದಿಂದೀ ಸಂಪ್ರದಾಯವೂ ಬದಲಾಗಿ ಎಲ್ಲರ ಅಧಿಕಾರವೂ ಇವರಿಂದಲೇ ಆಕ್ರಮಿಸಲ್ಪಟ್ಟಿರುವದೋ ಎಂಬ ಭಾವನೆಗೆ ಅವಕಾಶವಾಗಿರುವದು.

ಮಿಲ್ಲರ್ ಕೂಟದ ವರದಿಯು ಹುಟ್ಟಿದಾಗಿಂದ, ಮೊದಲಿನಿಂದಲೂ ಧರ್ಮಶ್ರದ್ಧೆಯುಳ್ಳವರಾಗಿ, ಸಂಸ್ಕೃತ ಭಾಷೆಯನ್ನು ಜನ್ಮಾಗಿ ಕಲಿತು ಅನೇಕ ಪಂಡಿತರುಗಳಿಗೆ ಆಶ್ರಯದಾತರಾಗಿ ಅವರಿಂದ ಧಾರ್ಮಿಕ ವಿಷಯಗಳನ್ನು ಜಿಜ್ಞಾಸ ಪೂರ್ವಕ ತಿಳಿದು, ಅನೇಕ ದೇವತಾಸೇವೆಗಳನ್ನು ಮಾಡಿಯೂ ಮಾಡುತ್ತಲೂ ಇರುವ ಸದ್ವಂಶೀಯರಾದ ನಮ್ಮ ಸರ್ದಾರ್ ಸರ್. ಕಾಂತರಾಜಅರಸರೂ ಬ್ರಹ್ಮದ್ವೇಷಿಗಳಾಗುವ ಸಂಭವವುಂಟೇ! ಎಂದು ಅನೇಕರು ಅನುಮಾನಿಸುತಿದ್ದುದನ್ನು ನಮ್ಮ ಹಂಜಾ ಸಾಹೇಬರವರು ಸರಿಪಡಿಸಿದಂತಾಯಿತು. ಇದಕ್ಕಾಗಿ ಅವರಿಗೆ ತುಂಬಾ ವಂದನೆಗಳು.

ನಮ್ಮ ದೇಶದಲ್ಲಿ ಮೊದಲಿಂದಲೂ ಯಾವ ಜಾತಿ ಮತ ಮತ್ಸರಗಳೂ ಇರಲಿಲ್ಲ. ಇದು ಬಳ್ಳಾರಿಯಲ್ಲಿ ವಕೀಲರಾಗಿದ್ದು ಸರಿಯಾಗಿ ಪ್ರಕಾಶಕ್ಕೆ ಬರದೆ, ಅಲ್ಲಿನ ಲಿಂಗಾಯಿತ ಮಹಾಜನಗಳ ಅನುರಾಗವನ್ನು ಕಳೆದುಕೊಂಡು ಅಲ್ಲಿ ಬಾಳಲಾರದೆ ಮೈಸೂರಿಗೆ ಓಡಿಬಂದು ಗತಿಸಿದ ಮ|| ಬಸವಯ್ಯನವರಿಂದ ಆರಂಭವಾಯಿತು. ಇವರು ಇಲ್ಲಿನ ಬ್ರಾಹ್ಮಣರು ವಿದ್ಯಾವಂತರಾಗಿಯೂ ಸ್ವಸಾಮರ್ಥ್ಯದಿಂದ ದೊಡ್ಡದೊಡ್ಡ ರಾಜಕೀಯ ಉದ್ಯೋಗಗಳನ್ನು ಪಡೆದು ಮಾನ್ಯರಾಗಿಯೂ ಇರುವುದನ್ನು ನೋಡಿ ಸಹಿಸದೇ ಹೋದರು. ಕುಜೇಷ್ಟೆ ಏನಾ ಪ್ರತಿಷ್ಟೆ ಬರುವುದಿಲ್ಲವೆಂಬ ಗಾದೆಗೆ ಸರಿಯಾಗಿ ಏನಾದರೊಂದು ಜಳವಳಿಯನ್ನು ತಂದು ತಾವು ಪ್ರಸಿದ್ಧರಾಗಬೇಕೆಂದು ಬ್ರಹ್ಮದ್ವೇಷದಿಂದ ಗಡಿಬಿಡಿಗೆ ಹೊರಟರು. ಮು|| ಬಸವಯ್ಯನವರೂ ಇವರ ಇಂದ್ರಜಾಲಕ್ಕೆ ಸಿಕ್ಕಿ ಮೋಸಹೋದ ಕೆಲವು ಬ್ರಾಹ್ಮಣೇತರ ಹಿಂದೂ ದೊಡ್ಡ ಮನುಷ್ಯರುಗಳೂ ಬೆಂಗಳೂರು ಕಂಟೋನ್ಮೆಂಟಿಗೆ ಹೋದಾಗೊಂದು ಸಟಿಗೆ ಬಂದಾಗೊಂದು ಮಾತುಗಳಾಡಿ ಅಭಾಸಮಾಡುವ ಮಹಮ್ಮದೀಯರೊಬ್ಬರೂ ಇವರೆಲ್ಲರೂ ನಿಂತು ನಡೆಸಿದ ಕೂಟಕ್ಕೆ ಮೊದಲಿಂದಲೂ ಪ್ರೋತ್ಸಾಹದಾಯಕರಾಗಿದ್ದೇ ಈ ರೀತಿಯಾದ ಬ್ರಹ್ಮದ್ವೇಷವನ್ನು ಕಾರುತ್ತಿರುವ ಅನ್ಯಾಯವಾದ ಅಪ್ಪಣೆಯನ್ನು ರೂಢಿಗೆ ತರಲು ನಮ್ಮ ಹಜರತ್ತರವರು ಅವಕಾಶವನ್ನು ಉಂಟುಮಾಡಿದರೆಂದು ಯೋಚಿಸಲೂ ಅವಕಾಶವಾಗಿರುವದು. ಇಂತಹ ದುರಭಿಪ್ರಾಯದವರ ಸಮೂಹದಲ್ಲಿ ಸಿಕ್ಕಿ ಹಿಂದೆ ಹೋದರೆ ಭಾವಿ ಮುಂದೆ ಬಂದರೆ ಕೆರೆ ಎಂಬಂತೆ ಅನುಸಂಕಟಕ್ಕೊಳಗಾಗಿರುವ ನಮ್ಮ ಸರ್ದಾರರವರು ತಾನೇ ಏನು ಮಾಡಿಯಾರು ? ದೊಡ್ಡ ವಂಶದಲ್ಲಿ ಜನಿಸಿ ದೊಡ್ಡ ತರಹೆಯಲ್ಲಿಯೇ ಬೆಳೆದು ಸುತಿಕ್ಷ್ಣತರಾಗಿ ಸ್ವಸಾಮರ್ಥ್ಯಬಲದಿಂದಲೇ ಮಹೋನ್ನತ ಪದವಿಯನ್ನಲಂಕರಿಸಿ ಯಾವ ಕಾಪಟ್ಯವನ್ನೂ ಅರಿಯದೇ ಇದ್ದರೂ ನಮ್ಮ ಅರಸರವರೂ ಸಹವಾಸ ದೋಷದಿಂದ ಜನಗಳ ಭಿನ್ನಾಭಿಪ್ರಾಯಕ್ಕೊಳಗಾಗಬೇಕಾಗಿ ಬಂದಿತು. ಒಂದೊಂದು ವೇಳೆ ಸಜ್ಜನರು ದುರ್ಜನರಂತೆಯೂ, ದುರ್ಜನರು ಸಜ್ಜನರಂತೆಯೂ ಭಾವಿಸಲ್ಪಡುವುದುಂಟು. "ವಸಂತಕಾಲೇ ಸಂಪ್ರಾ

ಪ್ತೇ ರಾಕಃರಾಕಃ ಪಿಕಃಪಿಕಃ'' ಎಂಬಂತೆ ನಮ್ಮ ಅರಸಿನವರಿಗೆ ಬಂದಿದ್ದ ಕಳಂಕವು ಮೆ|| ಹಂಜಾ ಹುಸೇಕ್ ಸಾಹೇಬರಿಂದ ಪರಿಹಾರವಾಯಿತು. ಆದರೆ ನಮ್ಮ ಹಂಜಾ ಸಾಹೇಬರು ಮಾತ್ರ ತಮ್ಮ ಮನೋವೃತ್ತಿಯ ಸಂಕುಚಿತ ಭಾವವನ್ನು ತೋರ್ಪಡಿಸಿಕೊಂಡದ್ದು ಕೇವಲ ವಿಷಾದಕರ.

ಕೋಲಾರ ಡಿಸ್ಟ್ರಿಕ್ಟಿನಲ್ಲಿ ಮಹಮ್ಮದೀಯರು ಮಾಡುತ್ತಿರುವ ಹಾವಳಿಗಳ ವಿಷಯವಾಗಿ ಕೌನ್ಸಿಲ್ಲಿನಲ್ಲಿ ಮಾತನಾಡಿದ ಮೆಂಬರ ಮಾತುಗಳನ್ನು ಉತ್ಪ್ರೇಕ್ಷೆಯೆಂದು ವಾದಂತಾಗಿ ನಿವಾರಿಸಿ ಸ್ವಮತಾಭಿಮಾನದಿಂದಲೋ ಎಂಬಂತೆ ಅಂತಹ ಗಲಭೆಗಳು ಅತಿ ಸಾಮಾನ್ಯವಾಗಿ ನಡದೇ ನಡೆಯುತ್ತವೆ ಎಂದು ಹೇಳಿ ವಿಚಾರದ ಕಡೆಗೂ ಲಕ್ಷ್ಯ ಕೊಡದೆ ತೇಲಿಸಿ ಮಾತಾಡಿರುವದು ನಮ್ಮ ಸಾಹೇಬರವರ ಸಮದೃಷ್ಟಿಯೆಷ್ಟುನುಟ್ಟಿನದೆಂಬುದನ್ನು ಸೂಚಿಸುತ್ತದೆ. ಇವರು ಹಿಂದೂಗಳಲ್ಲಿ ಬ್ರಾಹ್ಮಣಾ ಬ್ರಾಹ್ಮಣ ವಿವಾದಗಳು ಬಂದರೆ ಬ್ರಾಹ್ಮಣರನ್ನು ನಿಗ್ರಹಿಸಲು ಬ್ರಾಹ್ಮಣೇತರ ಹಿಂದುಗಳ ಬೆನ್ನು ತಟ್ಟಿದರೂ ಹಿಂದೂ ಮುಸಲ್ಮಾನರ ವಿವಾದಗಳು ಬಂದಾಗ ಯಾವದನ್ನೂ ನೋಡದೆ ಸ್ವಮತಾಭಿಮಾನವನ್ನು ತೋರಿಸುವವರೂ ಆಗಿರಬಹುದೆಂದು ಭಾಸವಾಗುತ್ತದೆ

ಕೋಲಾರ ಡಿ|| ನಲ್ಲಿ ಮೆ|| ಜಾಹಿರುದ್ದೀಕ್ ಮಕ್ಕೇ ಸಾಹೇಬರವರು ನವಾಬಗಿರಿಯನ್ನು ಮಾಡುತ್ತಾ ಅವಕಾಶವಿರಲಿ ಇಲ್ಲದಿರಲಿ, ಕಲ್ಪಿಸಿಕೊಂಡಾದರೂ ಸ್ವಜನರನ್ನುದ್ಧರಿಸುತ್ತಲಿರುವರೆಂದು ಟ್ರೂತ್ ಮೊದಲಾದ ಪತ್ರಿಕೆಗಳವರು ತಿಳಿಸುತ್ತಿರುವದೂ, ಮೆಕ್ಕೇಸಾಹೇಬರು ಡೆಪ್ಯೂಟಿಕಮಿಷನರಾಗಿರುವ ಕಾಲದಲ್ಲಿಯೇ ಆ ಡಿಸ್ಟ್ರಿಕ್ಟಿನ ಮುಸಲ್ಮಾನರು ಹಿಂದೂಗಳ ಮೇಲೆ ಅತ್ಯಾಚಾರಗಳನ್ನು ನಡೆಸುತ್ತಲಿರುವದೂ, ಚಿಂತಾಮಣಿಯ ದುರ್ಬಲರಾದ ವೈಶ್ಯರು ಅಲ್ಲಿನ ಮುಸಲ್ಮಾನರಿಂದ ಅನೇಕ ಕಷ್ಟನಷ್ಟಗಳಿಗೆ ಗುರಿಯಾಗಿರುವದೂ, ಮೈಸೂರಲ್ಲಿ ಲೋಕಮಾನ್ಯ ತಿಲಕರವರ ಆರಾಧನೆಯ ದಿವಸ ಸಿಟಿ ಸೂಪರಿಂಟಿಂಡೆಂಟ್ ಗನ್ನೀ ಸಾಹೇಬರು ಶ್ರೀಮನ್ಮಹಾರಾಜರವರ ಮತ್ತು ಲೋಕಮಾನ್ಯರ ಭಾವಚಿತ್ರಗಳನ್ನು ಬಾಲಕರು ತೆಗೆದುಕೊಂಡು ಬೀದಿಯಲ್ಲಿ ಬರುತ್ತಿದ್ದರೆ ತಡೆದು, ಪೋಲೀಸರ ಸಹಾಯವನ್ನು ಕರಿಸಿ ವಿದ್ಯಾರ್ಥಿಗಳನ್ನು ಬೆದರಿಸಿ ಶ್ರೀಮನ್ಮಹಾರಾಜರವರ ಭಾವಚಿತ್ರವನ್ನು ಸಹಾ ಕಾಲಿನಿಂದ ತುಳಿದು ಪುಡಿಪುಡಿ ಮಾಡಿರುವದೂ, ಇಂಥಾವರ ವಿಷಯದಲ್ಲಿ ಸರ್ಕಾರದವರು ಏನೂ ಶಿಕ್ಷೆ ಮಾಡದೆ ತಟಸ್ಥರಾಗಿರುವದೂ, ಮತ್ತೀಚಗೆ ಮೈಸೂರಂಥಾ ರಾಜಧಾನಿಯಲ್ಲಿಯೇ ಮಹಮ್ಮದೀಯರು ತಮ್ಮ ಹಬ್ಬದ ದಿವಸ ಮುಂದರಿದ ಕಾರ್ಯವನ್ನು ಮಾಡಿರುವದೂ, ಇದೆಲ್ಲದರ ಜೊತೆಗೆ ಸಾಲದುದಕ್ಕೆ ದೇಶಾಂತರದಲ್ಲಿ ಮಾಪಿಳ್ಳೆಗಳು ಭಯಂಕರವಾದ ಅನಾಹುತಗಳನ್ನು ನಡೆಸಿರುವದೂ ಒಂದೊಂದೂ ಸ್ಮರಣೆಗೆ ಬಂದರೆ ಈ ಇಪ್ಪತ್ತನೆಯ ಶತಮಾನದಲ್ಲೂ ಪುನಃ ಹೈದರಲ್ಲಿ ಟಿಪ್ಪುಸುಲ್ತಾನರ ಅವತಾರವಾಯಿತೋ ಎಂಬ ಭಯವನ್ನುಂಡುಮಾಡುತ್ತಲಿರುವದು. ಆದರೆ ಹೈದರಲ್ಲಿ ಟಿಪ್ಪುಸುಲ್ತಾನರುಗಳು ಎಷ್ಟೋ ನಿರಂಕುಶಪ್ರಭುತ್ವ ಮಾಡಿದರೂ ಸರ್ಕಾರದ ಉದ್ಯೋಗಕ್ಕೆ ಸಮರ್ಥರಾದವರನ್ನೇ ಆರಿಸಿ ಬ್ರಾಹ್ಮಣಾ ಬ್ರಾಹ್ಮಣ ದ್ವೇಷ ಎಡದೆ ತಮ್ಮ ನೌಕರರ ಎತಯದಲ್ಲಿ ಮಾತ್ರ ಸಮದೃಷ್ಟಿಯನ್ನೇ ಇಟ್ಟಿದ್ದರು. ಆ ಸುಲ್ತಾನರುಗಳ ಕಾಲದಲ್ಲಿಯೂ ವಿಶೇಷ ಪ್ರಾಮುಖ್ಯವಾದ ಅಧಿಕಾರಗಳಲ್ಲಿ ಬ್ರಾಹ್ಮಣರೂ ಇದ್ದರೆಂದು ಚರಿತ್ರೆಗಳಿಂದ ತಿಳಿದು ಬರುವದು.

ಪ್ರಕೃತ ನಮ್ಮ ಹಜರತ್ ಕೌನ್ಸಿಲರ್ ಸಾಹೇಬರವರು ಯೋಗ್ಯತೆಯ ಮೇಲೂ ದೃಷ್ಟಿಯಿಡದೆ ಎಲ್ಲಿ ಇನ್ನು ಮುಂದೂ ಬ್ರಾಹ್ಮಣರೇ ಮುಂದಾಗುವರೋ ಎಂದು ಭಾವಿಸಿ ಮಿಲ್ಲರ್ ಕೂಟದ ವರದಿಯ ಮೇಲನಪ್ಪಣೆಗೆ ಅಧಾರಸ್ತಂಭವಾಗಿ ನಿಂತದ್ದು ಮಾತ್ರ ಪ್ರತಿಯೊಬ್ಬ ಬ್ರಾಹ್ಮಣನಿಗೂ ನ್ಯಾಯ ಪಕ್ಷಪಾತಿಗಳಾದ ಇತರರಿಗೂ ಸಹ ನವಾಬರುಗಳ ದೌಲತ್ತಿನ ಜ್ಞಾಪಕವನ್ನು ತಂದುಕೊಡದೇ ಬಿಡುವುದಿಲ್ಲ.

ಮೆ|| ಹಂಜಾಹುಸೇಕ್ ಸಾಹೇಬರವರು ಬ್ರಾಹ್ಮಣಾಧಿಕಾರಿಗಳ ಸಹಾಯದಿಂದಲೇ ದೊಡ್ಡ ಉದ್ಯೋಗವನ್ನು ಪಡೆದು ಅವರಿಂದಲೇ ಅಭಿವೃದ್ಧರಾಗಿ ದೊಡ್ಡ ಪದವಿಯನ್ನನುಭವಿಸುತ್ತಲಿದ್ದರೂ, ತಮಗೆ ಉಪಕಾರ ಮಾಡಿದವರ ಕುಲಕ್ಕೇ ಕೊಡಲಿಯನ್ನು ಹಾಕುವ ಮಿಲ್ಲರೋ ಅಥವಾ ಕಿಲ್ಲರೋ ಎಂಬ ಕೂಟದ ವಂದಿಯ ಮೇಲಿನ ಅಪ್ಪಣೆಗೆ ಬದ್ಧಕಂಕಣರಾಗಿ ನಿಂತದ್ದು ಇವರ ಕೃತಜ್ಞತೆಯನ್ನು ಚನ್ನಾಗಿ ತಿಳಿಸುವದು,

ಈಚೀಚಗಂತೂ ಕೆಲವು ಪತ್ರಿಕಾಕರ್ತರುಗಳು ಪೂರ್ವಾಪರ ಜ್ಞಾನವಿಲ್ಲದೆ ದ್ವೇಷ ಜನಕವಾದ, ಓದಲೂ ಅನರ್ಹವಾದ ದುರ್ಭಾಷೆಗಳನ್ನು ಬರೆದು ತಾವೂ ಅಪವಿತ್ರರಾಗಿ ಓದುವರ ಬುದ್ಧಿಯನ್ನು ಅಪವಿತ್ರಮಾಡಿ ಜಾತಿ ಮತ ಮತ್ಸರಗಳನ್ನುಂಟುಮಾಡುತ್ತಿರುವದು ಜನಾಂಗಕ್ಕೇ ಕೇವಲ ಅಜ್ಞಾಸ್ಪದವಾದ ವಿಷಯವಾಗಿದೆ.

ಇಂತಹ ವಿಷಮ ಕಾಲದಲ್ಲಿ ರಾಜ್ಯಭಾರ ಕ್ರಮವು ನಿಷ್ಪಕ್ಷಪಾತವಾಗಿಯೂ, ಸರ್ವ ಪ್ರಜೆಗಳಿಗೂ ಸಮವಾದ ಹಕ್ಕು ಬಾಧ್ಯತೆಗಳನ್ನುಳಿಸಿ ಕೊಡುವದಾಗಿಯೂ ಇರುವಂತೆ ನಡೆಯಬೇಕಾದರೆ ನಮ್ಮನ್ನಾಳುವ ಶ್ರೀಮನ್ಮಹಾರಾಜರವರು ಈ ಸಮಯದಲ್ಲಿ ಪ್ರತಿಯೊಂದು ರಾಜಕಾರ್ಯಗಳನ್ನೂ ಸ್ವಂತ ಪರಾಂಬರಿಕೆಯಿಂದ ವ್ಯವಸ್ಥೆಗೊಳಿಸಿ ಧರ್ಮವಾದ ಅಪ್ಪಣೆಗಳನ್ನು ದಯಪಾಲಿಸುತ್ತಾ ಬಂದಲ್ಲಿ, ಅನಾದಿಯಿಂದಲೂ ಬಂದಿರುವ ನಮ್ಮ ಸಂಸ್ಥಾನದ ಸತ್ಕೀರ್ತಿಯನ್ನುಳಿಸಿ ಪ್ರಜೆಗಳನ್ನುದ್ಧರಿಸಿದಂತಾಗುವದು.

ಹಾಗಿಲ್ಲದೆ ನಮ್ಮ ಖಾವಂದರವರೂ ತಾಟಸ್ಥ್ಯವನ್ನು ವಹಿಸಿದ ಪಕ್ಷದಲ್ಲಿ ಕಾಲಜಕ್ಕದ ಕೆಳಗೆ ಸಿಕ್ಕಿರುವ ಮಂದಭಾಗ್ಯರಾದ ಸಭ್ಯ ಪ್ರಜೆಗಳ ಬಾಳಿಕೆಯೂ, ದೇಶದ ಸ್ಥಿತಿಯೂ, ಹೇಗೆ ಪರಿಣಮಿಸುವದೋ ಎಂಬ ಭಯವು ಬೇರೇ ತಪ್ಪುವದಿಲ್ಲ,

ಬ್ರಾಹ್ಮಣಾಬ್ರಾಹ್ಮಣ ದ್ವೇಷಗಳಿಟ್ಟುಕೊಂಡು ನಮ್ಮ ಹಿಂದೂ ಸಹೋದರರೇ ಸ್ವಮತಾಭಿಮಾನವನ್ನು ತ್ಯಜಿಸಿ ವಿಧರ್ಮಿಗಳೊಡನೆ ಕಲೆತು ಬ್ರಾಹ್ಮದ್ವೇಷಕಾರ್ಯಂಭಿಸಿದರೆ, ತಮ್ಮ ತಲೆಯನ್ನು ತಾವೇ ತಮ್ಮ ಕೈಯಲ್ಲಿರುವ ಕತ್ತಿಯಿಂದ ಕತ್ತರಿಸಿಕೊಂಡಂತಾಗುವದಲ್ಲದೆ ಮತ್ತಾವ ಪ್ರಯೋಜನವೂ ಆಗುವದಿಲ್ಲ.

ಈಗಿನ ವಿವಾದಗಳಿಂದ ಬ್ರಾಹ್ಮಣೇತರ ಹಿಂದುಗಳಿಷ್ಟೆಷ್ಟು ಫಲವನ್ನು ಹೊಂದಿ ಮುಂದೆಬಂದಿರುವರೋ ನೋಡಿದರೆ ''ಇಬ್ಬರ ಜಗಳ ಮೂರನೆಯವರಿಗೆ ಲಾಭ'' ವೆಂಬ ಗಾದೆಯ ನಿಜತ್ವವು ಹೊರಬೀಳುವದು.

ನಮ್ಮ ದೇಶದಲ್ಲಿ ಪ್ರಜಾಸಂಖ್ಯೆಯಲ್ಲಿ ನಾಲ್ಕನೇ ಒಂದು ಭಾಗವಾಗಿರುವ ಒಕ್ಕಲಿಗರಿಗೂ ಇತರ ಎಲ್ಲಾ ತೋಮಿನ ಹಿಂದೂಗಳಿಗೂ ಸ್ವಲ್ಪಮಾತ್ರ ಜನಸಂಖ್ಯೆಯುಳ್ಳ ಮಹಮ್ಮದೀಯರಿಗೂ ಸಿಕ್ಕಿರುವ ವಿದ್ಯಾರ್ಥಿವೇತನಗಳ ವಿವರವನ್ನಾದರೂ ನೋಡಿದರೆ ಒಕ್ಕಲಿಗರಿಗೆ 550, ಇತರ ಎಲ್ಲಾ ಹಿಂದುಗಳಿಗೆ 200 ಮಹಮ್ಮದೀಯರಿಗೆ 580 ಇದರಂತೆಯೇ ಸರ್ಕಾರದ ಉದ್ಯೋಗಗಳು ದೊರೆಕಿರುವದರ ಹೆಚ್ಚು ಸಂಖ್ಯೆಯೂ ಮಹಮ್ಮದೀಯರಿಗೇ ದೊರೆತಿರುವದು. ಸಂಸ್ಥಾನದ 27 ಲಕ್ಷ ಪ್ರಜೆಗಳಿಗೆ ಸಿಕ್ಕಬಹುದಾದ ಸೌಲಭ್ಯಗಳೆಲ್ಲವೂ ಪ್ರಕೃತ ಮಹಮ್ಮದೀಯರಿಗೇ ದೊರೆತಂತಾಗಿರುವದು. ಇಷ್ಟಾದರೂ ಆ ಜನರಿಷ್ಟೂ ತೃಪ್ತರಾಗದೆ ಪ್ರಜಾಪ್ರತಿನಿಧಿಸಭೆಯಲ್ಲಿ ತಮ್ಮ ಅತೃಪ್ತಿಯನ್ನು ತೋರಿಸುತ್ತಲಿರುವರು. ಈಗ ಪ್ರಜೆಗಳಲ್ಲಿ ಜಾತಿ ಮತ ಮತ್ಸರಗಳನ್ನು ಹೆಚ್ಚಿಸಿ ಒಂದು ತೋಮಿನವರನ್ನು ನೆಲಕ್ಕೆ ತುಳಿದರೆ ಅದೇ ಪ್ರತಿಫಲವೇ ಪ್ರತಿ ತೋಮಿನವರಿಗೂ ಉಂಟಾಗುವದು. ಏಕ ಕಾಲದಲ್ಲಿಯೇ ಎಲ್ಲಾ ತೋಮಿನವರೂ ಒಂದೇ ಸಮವಾಗಿ ವಿದ್ಯಾವಂತರಾಗಿ ಮುಂದಾಳುಗಳಾಗುವುದು ದುಸ್ಸಾಧ್ಯ. ಆಯಾ ಕಾಲಗಳಲ್ಲಿ ಹಿಂದು ಬಿದ್ದವರು ಮುಂದಾಳುಗಳಾದವರನ್ನು ಮತ್ಸರಿಸಬೇಕಾಗಿ ಒದುತ್ತದೆ. ಇತರರ ದ್ವೇಷಾಗ್ನಿಯಲ್ಲಿ ಮೊದಲು ಬ್ರಾಹ್ಮಣರು ಬಲಿಯಾದರೆ ಒಡನೆಯೇ ಅಲ್ಪ ಸಂಖ್ಯಾಕರಾದ ಅರಸು ಮಕ್ಕಳುಗಳು ವಿಶೇಷವಾಗಿ ವಿದ್ಯಾವಂತರಾಗಿ ಮುಂದುಬರುತ್ತಲಿರುವುದರಿಂದ ಅವರನ್ನು ನೋಡಿ ಅಸೂಯೆಯಿಂದ ದ್ವೇಷಕಾರಂಭಿಸುವರು. ಇವರ ಅನಂತರ ಮುಸಲ್ಮಾನರೂ, ಲಿಂಗಾಯಿತರೂ, ಒಕ್ಕಲಿಗರೂ ಒಬ್ಬೊಬ್ಬರಾಗಿ ತಮ್ಮ ಸರದಿಯನ್ನು ಹೊಂದುವರು. ಹೀಗೆಯೇ ಶತಮಾನಗಳಾದರೂ ದ್ವೇಷ ವೃಕ್ಷವು ಬೆಳೆಯುತ್ತಲೇ ಹೋಗಿ ಸರ್ವ ನಾಶವಾಗುವದು. ಹಿಂದಿನ ಶತಮಾನದಲ್ಲಿ ಈಗಿನಂತೆಯೇ ಜಾತಿ ಮತ ದ್ವೇಷಗಳಂಕುರಿಸಿ ಪ್ರಜೆಗಳಲ್ಲಿ ಶಾಂತಿ ತಪ್ಪಿದುದರಿಂದಲೂ ರಾಜ್ಯಸೂತ್ರವು ಶಿಥಿಲವಾಗುತ್ತಾ ಬಂದುದರಿಂದಲೂ ನಮ್ಮ ದೇಶದ ಆಡಳಿತದಲ್ಲಿ ಬ್ರಿಟಿಷ್ ಸರಕಾರದವರು ಪ್ರವೇಶಿಸಿ ತಹಬಂದಿಗೆ ತರಬೇಕಾಯಿತು: ನಮ್ಮ ದೇಶೀಯರೆಲ್ಲರೂ ಪೂರ್ವ ಚರಿತ್ರೆಗಳನ್ನೆಲ್ಲಾ ಒಂದೊಂದಾಗಿ ಸ್ಮರಿಸಿಕೊಂಡು ರಾಜರ್ಷಿ ಶ್ರೇಷ್ಠರಾದ

ನಮ್ಮ ತ್ರೀವುನ್ಮಹಾರಾಜರವರಲ್ಲಿ ಪೂರ್ಣಭಕ್ತಿಯನ್ನೂ ಸ್ವದೇಶದ ಸಂಪದಭ್ಯುದಯದಲ್ಲಿ ಆಸಕ್ತಿಯನ್ನೂ ಹೊಂದಿ ಪರಸ್ಪರ ಮೈತ್ರಿಯಿಂದ ನಡೆದಲ್ಲಿ ತಮ್ಮ ನಿಜವಾದ ಕರ್ತವ್ಯವನ್ನು ಮಾಡಿದಂತಾಗುವದು. ಈ ನೀತಿಯು ಪ್ರಜೆಗಳಿಗೆ ಹೇಗೋ ಹಾಗೆಯೇ ಸರ್ಕಾರದ ದೊಡ್ಡ ದೊಡ್ಡ ಪದವೀಧರರಿಗೂ ಸೂರುಮಡಿಲಾಗಿರಬೇಕಾದದ್ದು. ರಾಜ್ಯಾಡಳಿತ ಮಾಡುವ ಜವಾಬ್ದಾರರಾದ ಅಧಿಕಾರಿಗಳೇ ಜಾತಿ ಮತದ್ವೇಷಗಳ ಕಡೆಗೇ ಮನಸೋತರೆ ರಾಜದ್ರೋಹಕ್ಕೂ ಪ್ರಜಾದ್ರೋಹಕ್ಕೂ ಕಂಕಣಕಟ್ಟಿಕೊಂಡಂತಾಗುವದು.

ನಮ್ಮ ಹಿಂದೂಸ್ಥಾನದ ಇತರ ಭಾಗಗಳಲ್ಲೆಲ್ಲಾ ಪ್ರಜೆಗಳು ಐಕಮತ್ಯವನ್ನು ಹೊಂದುತ್ತಾ ದೇಶೋನ್ನತಿಯ ಕಡೆಗೆ ಗವಸವಟ್ಟ ತಮ್ಮ ತನುಮನಧನಗಳನ್ನೂ ಪ್ರಾಣಗಳನ್ನೂ ಒಪ್ಪಿಸುತ್ತಿರುವುದನ್ನು ತಿಳಿದಾದರೂ ನಮ್ಮ ದೇಶೀಯರು ಪರಸ್ಪರ ವಿವಾದಗಳನ್ನು ಬಿಡದೆ ಹೋದರೆ, ಸರ್ವನಾಶವನ್ನುಂಟುಮಾಡಿಕೊಂಡವಾಪವು ಬೇರೆ ಇವರ ಬೆನ್ನ ಬಿಡುವುದಿಲ್ಲ. ಯಾವ ದೇಶವೂ ಪ್ರಜೆಗಳಲ್ಲಿ ಭ್ರಾತೃಭಾವ ಪ್ರಭುಗಳಲ್ಲಿ ನ್ಯಾಯಪಕ್ಷಪಾತ ಇವೆರಡೂ ಉಂಟಾಡಲ್ಲದೆ ಅಭಿವೃದ್ಧಿಗೆ ಬರುವುದಿಲ್ಲ. ಈಗ ಹಿಂದೂಸ್ಥಾನದಲ್ಲಿ 2000 ವರ್ಷಗಳಿಂದಲೂ ಜಾತಿ ಮತ ಮತ್ಸರಗಳಿಂದೇನುಫಲವಾಗಿದೆ ಎಂಬುದನ್ನು ಪರ್ಯಾಲೋಚಿಸಿ ಮುಂದಾದರೂ ಸರ್ವರೂ ನಿಸ್ವೈರಿಗಳೂ ದೇಶಭಕ್ತರೂ ಧರ್ಮಾಭಿಮಾನಿಗಳೂ ನೀತಿಮತ ರಾಜಭಕ್ತರುಗಳೂ ಆದರೆ, ಹಿಂದೂಸ್ಥಾನದ ಪೂರ್ವದ ಮಹತ್ವವನ್ನು ಶೀಘ್ರದಲ್ಲಿಯೇ ಹೊಂದಿ ಸರ್ವರೂ ಸುಖಿಸಬಹುದು.

ಇದೆಲ್ಲವನ್ನೂ ನಮ್ಮ ಹಜರತ್ ಹಂಜಾಹುಸೇಕ್ ಸಾಹೇಬರವರು ತಮ್ಮ ಚಿತ್ತಕ್ಕೆ ಸಾವಧಾನವಾಗಿ ತೆಗೆದುಕೊಂಡು ಮನೋವಾಕ್ಕರ್ಮಗಳಲ್ಲಿ ಪರಿಶುದ್ಧವಾದ ಅಭಿಪ್ರಾಯವನ್ನು ತಂದುಕೊಂಡು ತಮಗೆ ದೇವರು ಮಹತ್ಪದವಿಯನ್ನು ಕೊಟ್ಟಿರುವ ಕಾಲದಲ್ಲಿ ಸರ್ವರಿಗೂ ಸಮದೃಷ್ಟಿಯಿಂದುಪಕಾರಮಾಡಿ ತಾವೂ ಕೀರ್ತಿವಂತರೂ ಕೃತಾರ್ಥರೂ ಆಗಲೆಂದು ಕೇವಲ ಹಿತಬುದ್ಧಿಯಿಂದ ವಿಜ್ಞಾಪಿಸಿರುವನು.

ಸಸ್ತಿ ಪ್ರಜಾಭ್ಯಃ ಪರಿಪಾಲಯಂತಾಂ
ನ್ಯಾಯೇನಮಾರ್ಗೇಣ ಮಹೀಂಮಹೀಶಾಃ ॥
ಗೋಬ್ರಾಹ್ಮಣೇಭ್ಯಶ್ಶುಭಮಸ್ತುನಿತ್ಯಂ
ಲೋಕಾಸ್ಸಮಸ್ತಾ ಸುಖಿನೋಭವಂತು ॥

ಧರ್ಮಾಭಿಮಾನಿ

"ಮೈ॥ ಹಂಜಾಹುಸೇಕ್ ಸಾಹೇಬರು" ಎಂಬ ಮೇಲೆ ಪ್ರಕಟಿಸಲ್ಪಟ್ಟಿರುವ ಲೇಖನದ ವಿಷಯದಲ್ಲಿ ನಮ್ಮದೊಂದೆರಡು ಮಾತುಗಳು. ಲೇಖಕರಿಗೆ ಸೂಚನೆಯಲ್ಲಿ "ಇತರ ಪತ್ರಿಕೆಗಳಿಗೆ ಕಳುಹಿಸಿದ ಲೇಖನಗಳು ನಮಗೆ ಕಳುಹಿಸಬೇಕಾದ್ದಿಲ್ಲ" ..... ಎಂಬದೊಂದು ವಿಷಯವಿದೆ, ಅದನ್ನು ಅರಿಯದೆ ಮೇಲಿನ ಲೇಖನದ ಲೇಖಕರಾದ "ಧರ್ಮಾಭಿಮಾನಿಗಳು" ನಮಗೂ ಮತ್ತೊಂದು ಪತ್ರಿಕೆಗೂ ಅದೇಲೇಖನ ಕಳುಹಿಸಿರುವರು. ನಮ್ಮ ಪತ್ರಿಕೆಯನ್ನು ಮುದ್ರಿಸಿ ಪ್ರಕಟಿಸುವ ಸಮಯದಲ್ಲಿ ಈ ಲೇಖನವನ್ನು ಸಂಪದಭ್ಯುದಯ ಪತ್ರಿಕೆಯಲ್ಲಿ ನೋಡಿ ತುಂಬಾ ವಿಷಾದಉಂಟಾಯಿತು ಈ ವಿಷಯದಲ್ಲಿ ಹೆಚ್ಚು ಬರೆಯಬೇಕಾದುದೇನಿದೆ!

[ಸಂ. ಸ]

ವಿದೇಶ ವಾರ್ತೆಗಳು

ಜಪಾನ್ ದೇಶದಲ್ಲಿ 'ಟೈಫೂನ್' ಎಂಬ ಉತ್ಪಾತವೆದ್ದು ಅನೇಕ ಕಡೆಗಳಲ್ಲಿ ಪ್ರವಾಹಗಳುಂಟಾಗಿ ಅನೇಕ ರಸ್ತೆಗಳೂ ರೈಲುರಸ್ತೆಗಳು ನಾಶವಾದುವು. ಸೂರಾರು ಮನೆಗಳು ಬಿದ್ದು ಹೋದುವು. ರೇವುಗಳಲ್ಲಿದ್ದ ಅನೇಕ ಹಡಗುಗಳು ಚೂರು ಚೂರಾದುವು ಅನೇಕ ಜನರು ಸತ್ತುಹೋದರೆಂದು ಊಹಿಸಲ್ಪಟ್ಟಿದೆ.

ಅಮೇರಿಕಾಖಂಡದಲ್ಲಿ (U.S.A.) ಸುಮಾರು ನಾಲ್ಕು ಮಿಲ್ಯ ಜನಗಳೂ, ಇಂಗ್ಲಾಂಡಿನಲ್ಲಿ ಸುಮಾರು ಒಂದು ಮಿಲ್ಯ ಜನಗಳೂ ಕಲಸವಿಲ್ಲದೆ ತಿರುಗುತ್ತಿದ್ದಾರೆ.

ಮೊದಲು ಗ್ರೀಕರು ತುರ್ಕಿಯವರೊಡನೆ ಕಾಲು ಮಾಡಿಕೊಳ್ಳಲೊಪ್ಪಿಕೊಳ್ಳಲಿಲ್ಲವಷ್ಟೆ ಈಚೆಗೆ ಗ್ರೀಕರಿಗೆ ತುಂಬಾ ನಷ್ಟವಾಗಿ ತುರ್ಕಿಯವರಿಗೆ ಜಯವಾಗಿದೆ. ಈಗ ಗ್ರೀಕರು ತುರ್ಕಿಯವರೊಡನೆ ಒಪ್ಪಂದ ಮಾಡಿಕೊಳ್ಳಬೇಕೆಂದು ಯೋಚಿಸಿದ್ದಾರಂತೆ. ಇದಕ್ಕೆ ಕೆಮಾಲ್ ಪಾಷಾರವರು ಒಪ್ಪುವಂತೆ ತೋರುವುದಿಲ್ಲ.

* * *

ಮಿ॥ ಲಾಯ್ಡ್ ಜಾರ್ಜರವರು ಮಿ॥ ಡಿವಾಲೆರಾರವರನ್ನು ಇಂಗ್ಲೆಂಡಿಗೆ ಪುನಃ ಒಂದು ಸಭೆಗೆ ದಯಮಾಡಬೇಕೆಂದು ಬರೆದಿರುವರು ಮಿ॥ ಡಿವಾಲೆರಾರವರು ಅದಕ್ಕೊಪ್ಪಿರುವರು. ಕಾರ್ಯಕ್ರಮಗಳು ಅನುಕೂಲವಾಗಿರಲೆಂದು ನಾವು ಹಾರೈಸುತ್ತೇವೆ.

* * *

ಜೈನಾದೇಶದಲ್ಲಿ ಜನರು ತಮ್ಮ ತಮ್ಮೊಳಗೆ ಯುದ್ಧಮಾಡುತ್ತಿರುವರಾಗಿಯೂ, ಆಯುಧಪಾಣಿಗಳಾದ ಸಿಪಾಯಿಗಳು ಮನೆಗಳನ್ನು ಸುಟ್ಟುಹಾಕುತ್ತಾ ಸಿಕ್ಕಿದ್ದನ್ನೆಲ್ಲಾ ದೋಚಿಕೊಂಡು ಹೋಗುತ್ತಾ ಇರುವುದಾಗಿಯೂ ತಿಳಿಯಬರುತ್ತದೆ.

* * *

ಆಸ್ಟ್ರೇಲಿಯಾಖಂಡದ ಮಂತ್ರಿವರ್ಯರಾದ ಮಿ॥ ಹವ್ಯಾಜೆಸ್‌ರವರು ಫಿಸಿಫಿಕ್ ಸಾಗರದ ವಿಚಾರ ಯಾವ ತೀರ್ಮಾನಗಳೂ ಆಗದೆ ಸೈನ್ಯ ಕಡಿಮೆಮಾಡುವ ವಿಚಾರದಲ್ಲಿ ಯಾವ ಮಾತನ್ನು ಹೇಳಲಾಗುವುದಿಲ್ಲವೆಂದು ಅಪ್ಪಣೆ ಕೊಟ್ಟಂತೆ ತಿಳಿಯಬರುತ್ತದೆ ಎಲ್ಲರೂ ತಮ್ಮ ಬಲವನ್ನು ಹೆಚ್ಚಿಸುವುದಾದರೆ ಜನಾಂಗ ಕೂಟದ ಕೆಲಸವೇನೊ

* * *

ಇದೇತಿಂಗಳು 3ನೇ ತಾರೀಖಿನ ದಿವಸ ಮೆಸ್ಲೆಯನ್ ಮಿಷನ್ ಸ್ಕೂಲ್ ವಿದ್ಯಾರ್ಥಿಗಳು ತಮ್ಮ ಪ್ರಿನ್ಸಿಪಾಲರಾದ ಮಿ॥ ಸ್ಪೆನ್ಸರ್ ಸಾಹೇಬರಿಗೆ ಫೇರ್‌ವೆಲ್ ಎಟ್ ಟರ್‌ಟೇನ್‌ಮೆಂಟ್ ಕೊಟ್ಟರು. ಈ ಕೂಟಕ್ಕೆ ಸೆಕ್ರೆಟರಿಗಳಾಗಿದ್ದ ಅದೇ ಸ್ಕೂಲಿನ ಎಟ್ರೆಕ್ಸ್ ಕ್ಲಾಸಿನ ವಿದ್ಯಾರ್ಥಿಗಳಾದ ಮ॥ ಎಸ್. ಶಂಕರಪ್ರಸಾದರವರು ಬಹು ಮುತುವರ್ಜಿಯಿಂದ ಕಾರ್ಯಗಳನ್ನು ನಡೆಸಿದುದು ಸ್ತೋತ್ರಾರ್ಹವಾಗಿದೆ.

RESERVED

ಲೇಖಕರಿಗೆ ಸೂಚನೆ

ಉಪಲೇಖಕರು ಪಡುವ ಅಭಿಪ್ರಾಯಕ್ಕೆ ನಾವು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸಕಲರೂ ತಿಳಿಯತಕ್ಕದ್ದು.

ಇತರ ಪತ್ರಿಕೆಗಳಿಗೆ ಕಳುಹಿಸಿದ ಲೇಖನಗಳು ನಮಗೆ ಕಳುಹಿಸಬೇಕಾದ್ದಿಲ್ಲ.

ಆಯಾ ಪತ್ರಿಕೆಯಲ್ಲಿ ಪ್ರಕಟಿಸಲ್ಪಡಬೇಕಾದವಿಷಯಗಳು ಆಯಾ ಶನಿವಾರದ ಹಿಂದಿನ ಬುಧವಾರದೊಳಗೆ ನಮ್ಮ ಕರಗತವಾಗಬೇಕು.

ಉತ್ತಮವಾದ ಹಾಸ್ಯರಸದಿಂದೊಡಗೂಡಿದ ಪ್ರಜಾಕ್ಷೇಮಾಭಿವೃದ್ಧಿ ವಿಷಯವಾದ ಲೇಖನಗಳು ಆದರದಿಂದ ಸ್ವೀಕರಿಸಲ್ಪಡುವುವು.

ಸತ್ಯಮೇವ ಜಯತೇ (ಗುಣವಾಗದಿದ್ದರೆ ಹಣ ಪರತ

ಧಾತುಪೌಷ್ಟಿಕ, ಕಾಮೋತ್ತೇಜನ, ಇಂದ್ರಿಯಸ್ತಂಭಕ)

ಮದನೋದ್ಭವ ಗುಳಿಗೆ

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮುಸೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಸ್ತ ಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರಹದ ಒಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು. ಕಟಿಶೂಲೆ, ವಾತರೋಗವು ಮುಂತಾದವು ಅತಿತ್ವರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯು ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಶೇವಿಸುವಾಗ್ಗೆ ನಪುಸಂಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ

ನಪುಸಂಕತ್ವಾರಿ ತೈಲವು

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ಕ ಬಾಹೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನು ಉಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿಗೆ ೨ ರೂ. ೧೨ ಆಣೆ ಅನುಪಾನ ಪತ್ರಿಕೆ ಔಷದ ಸಂಗಡ. ಟಪಾಲುಖರ್ಚು ಬೇರೆ

ವಿಳಾಸ:— ವೈದ್ಯ ಜಿ. ಎಲ್. ಜೋತಿ ಮತ್ತು ಕಂಪನಿ ಸಿ ವೋಷ್ಟ ಬನವಾಸಿ ಉತ್ತರ ಕಾನಡಾ.

ಮಾಪಿಳ್ಳೆ ಹೆಂಗಸರು ಜರಕದ ಸ್ಕೂಲಿನಿಂದ ತಮಗೆ ಕೊಡಲ್ಪಟ್ಟಿದ್ದ ಜರಕಗಳನ್ನು ವೋಲೀಸಿನವರ ಬೆದರಿಕೆಗಳಿಗೊಳಗಾಗಿ ವಾಪಸ್ಸು ಕೊಟ್ಟುಬಿಡುತ್ತಿದ್ದಾರೆಂಬ ದಾಗಿ ವರ್ತಮಾನವು ಬಂದಿರುತ್ತದೆ.

GOOD SEEDS

As good as can be grown Sow the right kind of seed at the right season and save disappointment. We have just the right kind of seeds for Indian climate— both flower and vegetable.

Beautifully illustrated large descripeh tive catalogue free on application. (Please mention this paper when writing. Please correspond in English only)

PESTONJEE P. POCHA & SONS

Seed Merchants, POONA.

ಮೊರುತೀ ಅಂಡ್ ಕೋ

ಪಿ. ಕೃಷ್ಣಶಾಸ್ತ್ರಿಗಳ ಆಯುರ್ವೇದೀಯ

ಔಷಧಗಳು

1. ಮಾರುತೀ ಅಂಜನ 2. ರೆಂಡ್ ಆಯಿಂಟ್‌ಮೆಂಟ್ 3, ಭೃಂಗಾಮಲಕ ತೈಲ 4. ಬಿಲ್ವಾದಿ ರಸಾಯನ 5. ಅಶ್ವಗಂಧೀ ರಸಾಯನ 6. ಗೋರೋಚನ ಕಸ್ತೂರಿ ಮಾತ್ರೆ ಮೇಲ್ಕಂಡ ಔಷಧಿಗಳು "ಮಾರುತೀ ಅಂಡ್ ಕೋ" ಯವರಲ್ಲಿ ಸಿಕ್ಕುತ್ತವೆ ಕ್ಯಾಟಲಾಗಿಯಬರೆರಿ ಫ್ರೀಯಾಗಿ ಕಳುಹಿಸುತ್ತೇವೆ ಮತ್ತು ಜಾತಕದ ಫಲಗಳನ್ನು ಬರೆಯುತ್ತೇವೆ ಫೀಜರ್ಡು 10-0-0 ಹಿಂದು ತಿಂಗಳ ಜಾತಕವನ್ನು ಫ್ರೀಯಾಗಿ ಬರೆದು ಕೊಡತ್ತೇವೆ ನಂ 1, 8. ಆ ನಂ 2, 8. ಆ ನಂ 3; 1-8 0. ರೂ ನಂ 4, 1-8-0 ರೂ ನಂ 5, 1-8-0 ರೂ ನಂ 6, 4. ಆ

ಮ್ಯಾನೇಜರ್ ಟಿ. ಕೆ. ಸುಬ್ಬಾಚಶಾಸ್ತ್ರಿ

ಮಾರುತೀ ಅಂಡ್ ಕೋ ಮೈಸೂರು

ಕಾಂಗ್ರೆಸ್ ಕೆಲಸಮಾಡುತ್ತಿದ್ದು ದಸ್ತಗಿರಿ ಮಾಡಲ್ಲಟ್ಟ ಕೆಲ್ಲಪ್ಪನಾಯರ್, ಬಾಲಕೃಷ್ಣನಾಯರ್ ಮತ್ತು ರಾಮಣ್ಣ ಮೇನನ್ ಇವರುಗಳು ತೀರೂರಿನಿಂದ ಕನ್ನಾನೂರು ಸೆಂಟ್ರಲ್ ಜೈಲಿಗೆ 18ನೇ ತಾರೀಖಿನ ದಿವಸ ಸಾಗಿಸಲ್ಪಟ್ಟರೆಂಬುದಾಗಿಯೂ ಈ ಮೂವರುಗಳು ಇನ್ನು 90 ಜನ ದಸ್ತಗಿರಿ ಮಾಡಲ್ಪಟ್ಟವರೊಡನೆ, ಕುದುರೆಯನ್ನು ಕೂಡತಕ್ಕ ಒಂದು ವಾಗಿನ್ನಿಗೆ ನೂಕಲ್ಪಟ್ಟು, ಮೇಲ್ ಟ್ರೇನಿನಿಂದ ಕನ್ನಾನೂರಿಗೆ ಒಯ್ಯಲ್ಪಟ್ಟರೆಂದು ಕಣ್ಣಾರ ನೋಡಿದ ಜನಗಳಿಂದ ತಿಳಿದುಬರುತ್ತದೆ

ವಿಚಾರಣೆಯಲ್ಲಿ ರತಕ್ಕ ದಸ್ತಗಿರಿ ಮಾಡಲ್ಪಟ್ಟ ಜನಗಳಿಗೆ ಕೊಡುತ್ತಿರುವ ಆಹಾರವು ಮನುಷ್ಯರು ಊಟಮಾಡುವುದಕ್ಕೆ ಯೋಗ್ಯವಾದುವುಗಳಲ್ಲವೆಂದೂ ಇದರಿಂದ ಅನೇಕ ಜನಗಳು ಹೊಟ್ಟೆಗಿಲ್ಲದೆ ಉಪವಾಸವಿರುವರಂತೆ.

ಸಚಿತ್ರ ಲೋಕಬಂಧು

ಧಾರವಾಡದಲ್ಲಿ ಪ್ರತಿ ವಾರವೂ ಹೊರಡತಕ್ಕ ಮೇಲೆ ಬರೆದ ಹೆಸರಿನ ರಾಷ್ಟ್ರೀಯ ಪಕ್ಷದ ಪತ್ರದಲ್ಲಿ ಸದ್ಯಪ್ರಸಂಗದ ನಾನಾಪ್ರಕಾರದ ವಿಷಯಗಳ ಮೇಲಿನ ಚಿತ್ರಗಳು ಕೊಡಲ್ಪಡುವವು ಕರ್ನಾಟಕದಲ್ಲಿ ಚಿತ್ರಯುಕ್ತವಾದ ಪತ್ರವು ಇದೊಂದೇ. ಈ ಪತ್ರವನ್ನು ಬೇಕಾದಾಗ್ಗೆ ಪ್ರಾರಂಭಿಸಲಿಕ್ಕೆ ಒರುವದು.

ಚಿತ್ರಯುಕ್ತ ಲೋಕಬಂಧು— ವಾರ್ಷಿಕ. ೪-೦-೦ ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಿರಿ

ಸಂಪಾದಕ: ಲೋಕಬಂಧು ಧಾರವಾಡ

ಶುಭೋದಯ

ರಾಜಕೀಯ, ಧಾರ್ಮಿಕ, ಸಾಮಾಜಿಕ ಮೊದಲಾದ ಮಹತ್ವವುಳ್ಳ ವಿಷಯಗಳನ್ನು ನಮ್ಮ ನಾಡಿನ ಭಾಷೆಯಲ್ಲಿ ಚರ್ಚಿಸಿ, ಜನತೆಯಲ್ಲಿ ಜಾಗ್ರತಿಯನ್ನುಂಟುಮಾಡುವದೇ ಈ ಪತ್ರಿಕೆಯ ಮುಖ್ಯೋದ್ದೇಶವು. ಕನ್ನಡ ಭಾಷೆಗೆ ಚಿತ್ತಾಕರ್ಷಕ ಸ್ವರೂಪವನ್ನು ಕೊಟ್ಟು ದೇಶೋನ್ನತಿಯ ವಿಷಯಗಳ ಕಡೆಗೆ ವಾಚಕರ ಲಕ್ಷವನ್ನು ಎಳೆಯುವದಕ್ಕೆ ಯತ್ನಿಸುತ್ತಿರುವದು. ಉಪಯುಕ್ತವಾದ ಎಲ್ಲ ತರದ ಸುದ್ದಿಗಳೂ ಬರುವವು. ಕರ್ನಾಟಕದ ಕಲ್ಯಾಣ ಕಾಂಕ್ಷಿಗಳು ಅವಶ್ಯವಾಗಿ ಓದಲೇಬೇಕು. ವಾರ್ಷಿಕಚಂದಾ ಅಂಚೆ ವೆಚ್ಚಸೇರಿ ೩-೧೪-೦

ವಿಳಾಸ:— ಸಂಪಾದಕ, ಶುಭೋದಯ, ಧಾರವಾಡ

ಮೈಸೂರುದೇಶದಲ್ಲಿ ಹೊಸ ಸೃಷ್ಟಿ

ಅತ್ಯುತ್ತಮವಾದ ಲೆದರ್ ಬ್ಯಾಗ್‌ಗಳು ಕಾರ್ಡವಸ್ ಬ್ಯಾಗ್‌ಗಳು ಸೂಟ್ ಕೇಸುಗಳು ನಮ್ಮಲ್ಲಿ ತಯಾರಾಗುತ್ತವೆ. ನಿಮಗೆ ಬೇಕಾದ ಅಳತೆ ಮತ್ತು ನವ ಸೊನೆಯಲ್ಲಿ ತೃಪ್ತಿಕರವಾಗಿ ತಯಾರ್ಮಾಡಿ ಕೊಡುತ್ತೇವೆ. ಕ್ರಯ ಬಹುಸುಲಭ ಅತ್ಯುತ್ತಮಕೆಲಸ. ಅಲ್ಲದೆ ನಮ್ಮಲ್ಲಿ ಪೋಟೋ ಲಾರ್ಜ್‌ಮೆಂಟ್ ಪೈಯಿಂಟರ್ ಕೆಲಸಗಳು ಉತ್ತಮತರಹ ಸೈನ್ ಬೋರ್ಡುಗಳು ತಯಾರಾಗುತ್ತದೆ.

ಎ ಯಕ್. ಸುಬ್ಬರಾವ್ ಆರ್ಟಿಸ್ಟ್

ಅಂಡ್ ಮೆಡಲಿಸ್ಟ್ ಕಲಾಮಂದಿರಂ ಬೆಂಗಳೂರು

"How to Learn Hindi"

By

Pandit Satyavrata Sidhantalankar

Highly spoken of

By Dr. Subrahmani Iyer

Mr C. Jinarajdas, Mr C. R. Reddy and Swami Shradananda. Send Re 1 at once to save disappointment. Postage extra.

Secretary ARYASAMAJ

Basavangudi BANGALORE & MYSORE

ಮೇಲ್ಕಂಡ ತಖ್ತೆಯಿಂದ ಮೂಲಧನಕ್ಕೆ ಶೇಕಡಾ 40 ಕ್ಕಿಂತ ಹೆಚ್ಚು ನಫೆ ತೇಲಿರುವುದು. ಇದಲ್ಲದೆ ದೊಡ್ಡಕೆರೆ ಕೋಡಿ ಆಚೆ ಇರುವ ಕೃಷ್ಣಾಗ್ರ ತೋಟದಲ್ಲಿ 32 ಎಕರೆ ಫಲವತ್ತಾದ ಜಮೀನನ್ನು ಐದ ವರ್ಷದ ಗುತ್ತಿಗೆ ತೆಗೆದುಕೊಂಡಿದಾರೆ. ಇದನ್ನೂ ಈ ಕಂಪೆನಿಯವರು ವಹಿಸಿಕೊಳ್ಳುವರು. ಇದಕ್ಕೆ ಲಾ॥ 2,000 ರೂಪಾಯಿ ಪ್ರತಿಫಲ ಗೊತ್ತುಮಾಡಿ ಈ ಮೊಬಲಗನ್ನು ಕಂಪೆನಿ ಷೇರುಗಳಾಗಿ ಪಾವತಿ ಮಾಡಲ್ಪಡುತ್ತದೆ.

ಕಂಪೆನಿಯನ್ನು ಇೂದಲು ಸಣ್ಣದಾಗಿಯೇ ಇಟ್ಟು ಸುಮಾರು 13,500 ರೂ. ನ 200 ಹಸು ಮತ್ತು ಎಮ್ಮೆಗಳನ್ನು ಕಟ್ಟಿ, ಹಾಲು ಉತ್ಪತ್ತಿ ಮಾಡಬೇಕೆಂತಲೂ ಸದ್ಯಕ್ಕೆ ಷೇರುದಾರರಿಂದ 25,000 ರೂ. ಮಾತ್ರ ಮೂಲಧನಕ್ಕೆ ಒದಗಿಸಿಕೊಳ್ಳಬೇಕೆಂತಲೂ ನಿಶ್ಚಯಿಸಲ್ಪಟ್ಟಿದೆ. ಈ ಮೂಲ ಧನದಿಂದ 1. ಹಸು ಎಮ್ಮೆಗಳಿಗೆ ರೂ. 13,000, 2. ಕೊಟ್ಟಿಗೆ ಗಾಡಿಗಳಿಗೆ ರೂ 2,000, 3. ಈಗಿರುವ ಕಂಪೆನಿಯ ಪ್ರತಿಫಲಕ್ಕೆ 2,000 4. ಪಾತ್ರೆ ಪದಾರ್ಥಗಳಿಗೆ ರೂ. 1,000, 5. ಕಂಪೆನಿ ಏರ್ಪಾಟಿನ ಖರ್ಚುಗಳಿಗೆ ರೂ. 2,000, 6. ಚಾಲ್ತಿ ಖರ್ಚುಗಳಿಗೆ ರೂ. 5,000, ಈ ರೀತಿ ವಿನಿಯೋಗಪಡಿಸಲಾಗುತ್ತದೆ.

ಇದರಿಂದ ಬರತಕ್ಕ ವರಮಾನ—ದನ 1 ಕ್ಕೆ ಎರಡುವರೆ ಸೇರಿನಂತೆ 200 ರಾಸುಗಳಿಂದ ಮಾಹೆಯಾನ 15000 ಸೇರು ಹಾಲು ಆಗಿ 4 ಸೇರಿನಂತೆ ರೂ. 3750 ಹುಟ್ಟುವಳಿ ಬರುತ್ತೆ. ಈ ಪೈಕಿ ರಾಸು 1 ಕ್ಕೆ ತಿಂಗಳಿಗೆ 10 ರೂ ನಂತೆ ಚಾರಾ ಖರ್ಚಿಗೆ ರೂ 2000 ಸಿಬ್ಬಂದಿಗೆ ರೂ. 550 ಏಜಂಟರ ಅಲೋಯನ್ಸಿಗೆ ರೂ 200, ಚಿಲ್ಲರೆ ಖರ್ಚುಗಳಿಗೆ ರೂ. 100 ಅಂತೂ ರೂ. 2850 ಖರ್ಚಾಗಿ ಮಾಹೆ 1ಕ್ಕೆ 900 ರೂ ನಿವ್ವಳ ನಫೆ ಉಳಿಯುತ್ತೆ. ಇದರಲ್ಲಿ ಕರುಗಳ ಮತ್ತು ಸಗಣಿಯ ಮಾರಾಟದಿಂದ ಬರತಕ್ಕ ನಫೆಯನ್ನು ಕೂಡಿಸಿಲ್ಲ. ಹ್ಯಾಗೂ ಈ ಏರ್ಪಾಡಿನಲ್ಲಿ ಕಂಪೆನಿಗೆ ಸಾಲಿಯಾನಾ 10800 ರೂಪಾಯಿ ನಫೆ ತೇಲುವುದೆಂದು ಧಾರಾಳವಾಗಿ ಇಟುಕೊಳ್ಳಬಹುದಾಗಿದೆ ಈ ನಫೆಯಲ್ಲಿ 1. ರಾಸುಗಳ ಬೆಲೆ ನಷ್ಟಕ್ಕೆ ರೂ. 2000. 2. ರಿಜರ್ವ್ ಫಂಡಿಗೆ ರೂ, 1000, 3. ಮ್ಯಾನೇಜಿಂಗ್ ಏಜಂಟರುಗಳ ಕಮಿಷನ್‌ಗಾಗಿ ರೂ 1000 4. ಆಡಿಟರುಗಳ ರುಸುಂಗೆ 500, ಈ ರೀತಿ ವಿನಿಯೋಗಿಸಿದಲ್ಲಿ ರೂ 6300 ಉಳಿಕೆಯಾಗಿ ಷೇರುದಾರರಿಗೆ ಶೇಕಡಾ 20 ರಿಂದ 30 ರ ತನಕ ಬಡ್ಡಿ ಬಟವಾಡೆ ಮಾಡಬಹುದಾಗಿದೆ.

ಕಂಪೆನಿ ಆಡಳಿತದ ಏರ್ಪಾಡು—ಎಂಟು ಮಂದಿ ಡೈರೆಕ್ಟರುಗಳು ಇದ್ದು ಕಂಪೆನಿಯ ವಿಶಿಷ್ಟ ಆಡಳಿತಗಳನ್ನೂ ನಡಿಸುತ್ತಾರೆ, ಮ್ಯಾನೇಜಿಂಗ್ ಏಜಂಟರುಗಳು ವಿನಾ ಉಳಿದ ಡೈರೆಕ್ಟರುಗಳಲ್ಲಿ ಪ್ರತಿಯೊಬ್ಬರೂ ರೂ 1000 ರೂಪಾಯಿ ಕಿಮ್ಮತ್ತು ಉಳ್ಳ 100 ಷೇರುಗಳನ್ನಾದರೂ ತಮ್ಮ ಸ್ವಂತ ಹೆಸರಿನಲ್ಲಿ ಪಡೆದಿರಬೇಕು ವ್ಯಾರಂಭದತ್ತಿ ಡೈರೆಕ್ಟರಾದವರಿಗೆ ಈ ಪರತ್ತಿನ ನಿರ್ಬಂಧವಿರಬೇಕಾದ್ದಿಲ್ಲ. ಆದರೂ ನೇಮಕವಾದ ಒಂದು ತಿಂಗಳ ವಾಯಿದೆಯಲ್ಲಿ ವಿಧಾಯಕವಾಗಿರುವಷ್ಟು ಷೇರುಗಳನ್ನು ಅವರು ಪಡೆಯುಕೊಂಡೇ ತೀರಬೇಕು. ಒಂದುವೇಳೆ ಅವರು ಹಾಗೆ ಪಡೆಯದಿದ್ದಲ್ಲಿ ಮೇಲೆ ನಷ್ಟೂದಾದಷ್ಟು ಷೇರುಗಳನ್ನು ಅವರು ಪಡೆದೆದಾರೆಂದೇ ಭಾವಿಸಲ್ಪಡತಕ್ಕದ್ದು. ಮತ್ತು ಕೂಡಲೇ ಅವರಿಗೆ ಆಷ್ಟು ಷೇರುಗಳನ್ನು ಹಂಚಿಕೆಯಲ್ಲಿ ತೆಗೆದಿಡತಕ್ಕದ್ದು.

ಮ್ಯಾನೇಜಿಂಗ್ ಏಜಂಟರುಗಳು—ಮ॥ ರಾ॥ ಶ್ರೀಗಳಾದ ಎಂ. ವಿ. ಸಂಜೀವರಾಜೇ ಅರಿಸಿನವರೂ ಮತ್ತು ಎಸ್. ಕೃಷ್ಣರಾಯರೂ ಸೇರಿ 20 ವರ್ಷ ಕಾಲ ಕರಾರಿನಲ್ಲಿ ಕಂಡ ಪಾರುತ್ತುಗಳಿಗೆ ಒಳಪಟ್ಟು ಕಂಪೆನಿಯ ಮ್ಯಾನೇಜಿಂಗ್ ಏಜಂಟರಾಗಿ ಇರತಕ್ಕದ್ದು. ಇದಕ್ಕಾಗಿ ಅವರಿಗೆ ನಿವ್ವಳ ನಫೆಯಲ್ಲಿ ಶೇಕಡಾ 10 ರಂತೆ ಕಮಿಷನ್ ಸಲ್ಲತಕ್ಕದ್ದು. ಇದಲ್ಲತೆ ಆಫೀಸ್ ಕೆಲಸಗಳಿಗೋಸ್ಕರ ಮಾಹೆಯಾನಾ 200 ರೂಪಾಯಿ ಅಲೋಯನ್ಸು ಅವರಿಗೆ ಪಾವತಿ ಆಗಬೇಕು. ಮ್ಯಾನೇಜಿಂಗ್ ಏಜಂಟರು ತಲಾ 1500 ರೂ ಕಿಮ್ಮತ್ತು ಉಳ್ಳ 150 ಷೇರುಗಳನ್ನು ಪಡೆದಿರಬೇಕು. ಡೈರೆಕ್ಟರುಗಳಾದ ಮ॥ ಕೆ. ಕೃಷ್ಣದಾಸ್, ಮ॥ ಸವಾಯ್ ರಂಗಣ್ಣ ಮ॥ ಎಸ್. ಕೃಷ್ಣರಾವ್ ಇವರು ಈಗ ಇರತಕ್ಕ ಡೆಯಿರಿ ಫಾರಂನಲ್ಲಿ ಕೆಲವು ಷೇರುಗಳನ್ನು ಪಡೆದಿರುತ್ತಾರಾಗಿ ಆದರ ಬಿಕ್ರಿ ಮೊಬಲಗಿನಲ್ಲಿ ಅವರಿಗೂ ಹಕ್ಕಿರುತ್ತದೆ.

ಷೇರು ಸರ್ಟಿಫಿಕೇಟುಗಳು—ಷೇರುಗಳು ಹಂಚಿಕೆಯಾದ ಆರು ತಿಂಗಳ ತನಕ ಷೇರು ಸರ್ಟಿಫಿಕೇಟುಗಳು ಬಟವಾಡೆಗೆ ಸಿದ್ಧಪಡುವುದಿಲ್ಲ. ಮತ್ತು ಕಂಪೆನಿಯಲ್ಲಿ ಕಡೇ ಪಕ್ಷ 15000 ಷೇರುಗಳಿಗೆ ದರಖಾಸ್ತು ಬಂದಲ್ಲದೆ ಷೇರು ಹಂಚಿಕೆ ಮಾಡಲ್ಪಡುವುದಿಲ್ಲ.

ಪ್ರಾರಂಭದ ಖರ್ಚುಗಳು—ಕಂಪೆನಿಯ ಆರಂಭದ ಖರ್ಚುಗಳು ದಳ್ಳಾಳಿ ಲಾಯರ್ ಫೀಜು ಇವೆಲ್ಲಾ 2000 ರೂ. ಆಗುವುದು. ಈ ಮೊಬಲಗನ್ನು ಕಂಪೆನಿಯವರು ಅಂಗೀಕರಿಸಿ ಪಾವತಿ ಮಾಡತಕ್ಕದ್ದು.

ಈಗಾಗಲೇ ಅರ್ಧಕ್ಕಿಂತ ಹೆಚ್ಚಾಗಿ ಷೇರುಗಳು ಬಂದಿರುವುದರಿಂದ ಜಾಗ್ರತೆಯಲ್ಲಿಯೇ ಅಲಾಟ್‌ಮೆಂಟ್ ಕೊಡಲಾಗುತ್ತೆ.

ಷೇರು ದರಖಾಸ್ತು—ಈ ಪ್ರಾಸ್ಪೆಕ್ಟಸ್ಸಿನ ಕೊಡ ಜಂಟಿಸಿರುವ ನಮೂನೆಯ ಫಾರಂನಲ್ಲೇ ಷೇರು ದರಖಾಸ್ತುಗಳನ್ನು ಭರ್ತಿಮಾಡಿ ದರಖಾಸ್ತಿಗೆ ಅನುಗುಣವಾದ ಮೊಬಲಗಿನ ಸದುತ ದಿ ಮೈಸೂರು ಬ್ಯಾಂಕ್ ಲಿಮಿಟೆಡ್, ಮೈಸೂರು ಎಂಬ ಕಂಪೆನಿ ಬ್ಯಾಂಕರಿಗೆ ರವಾನೆಮಾಡತಕ್ಕದ್ದು. ಷೇರ್ ಕೆಸ್ತುಗಳನ್ನು ವಾಯಿದೆ ಒಳಗೆ ಸಲ್ಲಿಸದೇ ತಪ್ಪಿದರೆ ಮೂರು ತಿಂಗಳ ವಾಯಿದೆಯೊಳಗೆ ಶೇಕಡಾ 9 ರಂತೆ ಬಡ್ಡಿ ಕೊಡಬೇಕು. ಆಗ್ಗೂ ಕೊಡದೇ ಹೋದರೆ ಮೊದಲೇ ಪಾವತಿ ಮಾಡಿರುವ ಮೊಬಲಗನ್ನು ಕಳೆದುಕೊಳ್ಳುವರು.

ಮೇಲ್ಕಂಡ ಕರಾರುಗಳು ಲೇಣಿ ದೇಣಿ ರಿಪೋರ್ಟು ಕಂಪೆನಿಯ ಮೆಮೋರಾಂಡಂ ಮತ್ತು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ ಇತ್ಯಾದಿಗಳನ್ನೆಲ್ಲಾ ಶ್ರೀ ಕೃಷ್ಣ ಡೆಯಿರಿ ಫಾರಂ ಲಿಮಿಟೆಡ್ ಮೈಸೂರು, ಇದರ ರಿಜಿಸ್ಟರ್ಡ್ ಮಾಡಲ್ಪಟ್ಟ ಮೇಲ್ಕಂಡ ವಿಳಾಸವುಳ್ಳ ಆಫೀಸಿನಲ್ಲಿ ನೋಡಬಹುದು.

ದಳ್ಳಾಳಿ—ಈ ಕಂಪೆನಿಯಿಂದ ಅಂಗೀಕರಿಸಲ್ಪಟ್ಟ ಬ್ರೋಕರ್ಸ್ ಯಾನೆ ದಳ್ಳಾಳಿಗಳ ಮೂಲಕ ಬರತಕ್ಕ ದರಖಾಸ್ತುಗಳ ಸಂಬಂಧದಲ್ಲಿ ಶೇಕಡಾ ಒಂದರಂತೆ ದಳ್ಳಾಳಿ ಕೊಡಲ್ಪಡುತ್ತದೆ.

ಈ ಕಂಪೆನಿಯ ಮೆಮೋರಾಂಡಂ ಆಫ್ ಅಸೋಸಿಯೇಷನ್ ಪ್ರತಿಯು ಈ ಪ್ರಾಸ್ಪೆಕ್ಟಸ್ಸಿಗೆ ಲಗತ್ತು ಮಾಡಿರುತ್ತದೆ ಮತ್ತು ಅದು ಈ ಪ್ರಾಸ್ಪೆಕ್ಟಸ್ಸಿನ ಒಂದು ಭಾಗವಾಗಿರುತ್ತದೆ.

ಷೇರು ಅಪ್ಲಿಕೇಷನ್ ಫಾರಂ 2—3 ಲ್ಯಾಕ್ಸ್ ಡೌನ್ ಬಿಲ್ಡಿಂಗ್ ಡೈರಿ ಫಾರಂ ಆಫೀಸಿನಲ್ಲಿ ದೊರಿಯುತ್ತೆ.

1. ಎಂ. ವೆಂಕಟಕೃಷ್ಣಯ್ಯ,
2. ಕೆ. ಕೃಷ್ಣದಾಸ್,
3. ಎಂ. ಕೃಷ್ಣೆ ಅರ್ಸ್,
5. ಎಂ. ಎ. ಸುಬ್ಬರಾವ್,
5. ಸವಾಯ್ ರಂಗಣ್ಣ,
6. ಎಸ್. ವೆಂಕಟರಾವ್,
7. ಎಂ. ವಿ. ಸಂಜೀವರಾಜೇ ಅರ್ಸ್ (ಸ್ಪೆಷಲ್)
8. ಎಸ್. ಕೃಷ್ಣರಾವ್, (ಸ್ಪೆಷಲ್)

ಕಂಪೆನಿಯ ಡೈರೆಕ್ಟರುಗಳು.
ಮೈಸೂರು.

Printed and Published by Mr. M. S. Krishna Rao, at the *Satyavadi* Press Yelwal Road, Sivarampet, Mysore.